

بِسْمِ اللَّهِ الرَّحْمَٰنِ الرَّحِيمِ

# ಯು.ಕೆ. ಜಲ್ಸಸಾಲಾನ 2017 – ತಯಾರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 21-07-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಯು.ಕೆ. ಜಲ್ಸ ಸಾಲಾನ ಇನ್‌ಶಾಅಲ್ಲಾಹ್ ಮುಂದಿನ ವಾರದ ಜುಮುಅದಿಂದ ಪ್ರಾರಂಭವಾಗಲಿದೆ. ಜಲ್ಸದಲ್ಲಿ ಭಾಗವಹಿಸಲು ವಿದೇಶಗಳಿಂದ ಅತಿಥಿಗಳು ಆಗಮಿಸುತ್ತಾ ಇದ್ದಾರೆ. ಬ್ರಿಟನಿನ ಬೇರೆ ನಗರಗಳಿಂದಲೂ ಅತಿಥಿಗಳು ಆಗಮಿಸುತ್ತಾ ಇದ್ದಾರೆ. ಜಲ್ಸದಲ್ಲಿ ಭಾಗವಹಿಸಿ ಅನುಗ್ರಹ ಪಡೆಯಲು ಆಶಿಸುವ ಅಹ್ಮದಿಯರು ಮಾತ್ರವಲ್ಲ, ಬೇರೆ ದೇಶಗಳಿಂದ ಅಹ್ಮದಿಯಾ ಜಮಾಅತಿಗೆ ಸೇರಿರದ ಜನರೂ ಮುಸ್ಲಿಮೇತರರಾದ ಅತಿಥಿಗಳೂ ಆಗಮಿಸುತ್ತಾರೆ. ಇಂತಹ ಜನರಲ್ಲಿ ಕೆಲವು ದೇಶಗಳ ಸರಕಾರಗಳ ಪ್ರತಿನಿಧಿಗಳು, ಸರಕಾರಿ ಅಧಿಕಾರಿಗಳು, ಪ್ರತಿಭಾವಂತರೂ ವಿದ್ಯಾವಂತರೂ ಸೇರಿರುತ್ತಾರೆ. ಪತ್ರಿಕೆಗಳ ಮತ್ತು ಮೀಡಿಯಾ ಪ್ರತಿನಿಧಿಗಳ ಸಂಖ್ಯೆ ಸಹ ಈಗ ವರ್ಧಿಸುತ್ತಾ ಇದೆ. ಇಲ್ಲಿಗೆ ಆಗಮಿಸುವ ಈ ಎಲ್ಲ ಜನರು ಬಹಳ ಗಾಢವಾದ ದೃಷ್ಟಿಯಿಂದ ನಮ್ಮ ಪ್ರತಿಯೊಂದು ವಸ್ತುವನ್ನು ನೋಡುತ್ತಾ ಇದ್ದಾರೆ. ಅವರೆಲ್ಲರೂ ಬಹಳ ಪ್ರಭಾವಿತರಾಗುತ್ತಾರೆ. ಅವರು ವಿಶಿಷ್ಟವಾಗಿ ನಾವು ಜಲ್ಸಕ್ಕೆ ಏರ್ಪಡಿಸಿದ ವ್ಯವಸ್ಥೆಯನ್ನು ನೋಡುತ್ತಾರೆ. ಸ್ವಯಂ ಸೇವಕರಿಂದ ಮಾಡಲಾಗುವ ಈ ವ್ಯವಸ್ಥೆಯ ಕಾರಣದಿಂದ ತಬ್ಲೀಗ್‌ಗೋಸ್ಕರ ಇನ್ನಷ್ಟು ಮಾರ್ಗಗಳು ತೆರೆಯಲ್ಪಡುತ್ತವೆ. ಅಹ್ಮದಿಯಾ ಜಮಾಅತಿನ ಬಗ್ಗೆ ಇನ್ನಷ್ಟು ಹೆಚ್ಚು ಪರಿಚಯ ಉಂಟಾಗುತ್ತದೆ. ಅಹ್ಮದಿಯ್ಯತ್ ಬಗ್ಗೆ ಹೆಚ್ಚಿನ ಮಾಹಿತಿ ಗಳಿಸಲು ಜನರು ಪ್ರಯತ್ನಿಸುತ್ತಾರೆ. ಜಲ್ಸದ ಈ ದಿನಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಪುರುಷರು, ಮಹಿಳೆಯರು, ಬಾಲಕರು, ಬಾಲಿಕೆಯರು ಸ್ವಯಂಸೇವಕರಾಗಿ ಮಾಡುವ ತಮ್ಮ ಕೆಲಸಗಳ ಮೂಲಕ ಮೌನವಾಗಿ ತಬ್ಲೀಗ್ ಮಾಡುತ್ತಾರೆ. ಪ್ರೆಸ್ ಮತ್ತು ಇತರ ಮಾಧ್ಯಮಗಳ ಮೂಲಕ ಬಹಳ ವಿಶಾಲವಾಗಿ ಜಗತ್ತಿನಾದ್ಯಂತ ಅಹ್ಮದಿಯ್ಯತ್ ಬಗ್ಗೆ ಪರಿಚಯ ಪ್ರಚಾರವಾಗುತ್ತದೆ. ಕೆಲವು ಸಾರಿ, ಕೆಲವು ಘಟನೆಗಳ ಕಾರಣದಿಂದ ಬೇರೆ ದಿನಗಳಲ್ಲಿ ಸಹ ಮಾಧ್ಯಮಗಳ ಶ್ರದ್ಧೆ ನಮ್ಮ ಜಮಾಅತಿನ ಕಡೆಗೆ ತಿರುಗುತ್ತಾ ಇರುತ್ತದೆ. ಉದಾಹರಣೆಗೆ ಯುರೋಪಿನಲ್ಲಿ ಸಂಭವಿಸಿದ ಕೆಲವು ಭಯೋತ್ಪಾದಕ ಘಟನೆಗಳ ನಂತರ ನಮ್ಮ ಜಮಾಅತಿನ ಜನರು– ಅವರಲ್ಲಿ ಪುರುಷರೂ ಮಹಿಳೆಯರೂ ಸೇರಿದ್ದಾರೆ– ಇಸ್ಲಾಮಿನ ನೈಜ ಸಂದೇಶವನ್ನು ಲೋಕಕ್ಕೆ ನೀಡಲು ಪ್ರಯತ್ನಿಸಿದ್ದರು. ಆಗ ನಮ್ಮ ಮಾಧ್ಯಮ ವಿಭಾದವರು ಸಹ ಬಹಳ ಮಹತ್ತಾದ ಕೆಲಸ ಮಾಡಿದ್ದರು. ಇಸ್ಲಾಮಿನ ಶಾಂತಿಪ್ರಿಯ ತತ್ವಗಳ ಬೆಳಕಿನಲ್ಲಿ ಲೋಕದ ಮಾಧ್ಯಮಗಳು ಜಮಾಅತನ್ನು ವಿಶಾಲವಾಗಿ ಲೋಕದಾದ್ಯಂತ ಪರಿಚಯಿಸಿದುವು. ಈ ಘಟನೆಗಳು ವರ್ಧಿಸುವಾಗ ಜಮಾಅತಿನ ಬಗ್ಗೆ ಪರಿಚಯ ಸಹ ಇನ್ನಷ್ಟು ವರ್ಧಿಸುತ್ತಾ ಇದೆ. ಜಲ್ಸ ಸಾಲಾನದ ಕಾಲದಲ್ಲಿ ಅಲ್ಲಾಹನು ಈ ಮಾಧ್ಯಮಗಳ ಮೂಲಕ ಇಸ್ಲಾಮ್ ಧರ್ಮದ ವಾಸ್ತವಿಕ ಪರಿಚಯ ವಿಶಾಲವಾಗಿ ಹರಡುವಂತೆ ಮಾಡುತ್ತಿದ್ದಾನೆ. ಜಲ್ಸದ ಕಾರ್ಯಕ್ರಮಗಳು, ಭಾಷಣಗಳು ಮೊದಲಾದುವುಗಳಿಂದ ಅಹ್ಮದಿಯರು ಆಧ್ಯಾತ್ಮಿಕ ಅಭಿವೃದ್ಧಿ ಗಳಿಸಲು ಪ್ರಯತ್ನಿಸುತ್ತಿರುವಾಗ ಅಹ್ಮದಿಯೇತರ ಅತಿಥಿಗಳು ಮತ್ತು ಮಾಧ್ಯಮಗಳ ಪ್ರತಿನಿಧಿಗಳು ನಮ್ಮ ನಂಬಿಕೆಗಳ ಬಗ್ಗೆ ಮತ್ತು ತತ್ವಗಳ ಬಗ್ಗೆ ಆಲಿಸುತ್ತಾ ಜಲ್ಸದ ಪರಿಸರ, ಪುರುಷರು ಮತ್ತು ಮಹಿಳೆಯರು ಜಲ್ಸಕ್ಕೋಸ್ಕರ ಮಾಡುವ ಸ್ವಯಂಸೇವಕ ಸೇವೆ, ಅತಿಥಿ ಸತ್ಕಾರದ ಮನೋಭಾವ, ಮೊದಲಾದುವುಗಳನ್ನು ನೋಡುತ್ತಾ ಇಸ್ಲಾಮ್ ಧರ್ಮದ ಸುಂದರ ಉಪದೇಶಗಳನ್ನು ಪ್ರಯೋಗಿಕ ರೂಪದಲ್ಲಿ ದರ್ಶಿಸುತ್ತಾರೆ. ಒಟ್ಟಿನಲ್ಲಿ ನಾನು ಹೇಳಿದ ಹಾಗೆ, ಜಲ್ಸ ಬಹಳ ಮಹತ್ವಪೂರ್ಣವಾದ ತಬ್ಲೀಗ್ ಮಾರ್ಗವಾಗಿದೆ. ಆದುದರಿಂದ ಸ್ವಯಂಸೇವಕರಾದ ಕಾರ್ಯಕರ್ತರು ಬಹಳ ದೊಡ್ಡ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಯಾವ ಸ್ಥಾನದಲ್ಲಿ ಕೆಲಸ ಮಾಡುತ್ತಾ ಇದ್ದರೂ ಆ ಸ್ಥಾನಕ್ಕೆ ಬಹಳ ಮಹತ್ವವಿದೆ. ಈ ಮಹತ್ವವನ್ನು ಒಬ್ಬ ಸಾಮಾನ್ಯ ಸಹಾಯಕನಿಂದ ಮೊದಲುಗೊಂಡು ಅಧಿಕಾರಿಯ ತನಕ ಪ್ರತಿಯೊಬ್ಬನು ತನ್ನ ಮುಂದೆ ಇರಿಸಬೇಕಾಗಿದೆ. ಒಬ್ಬ ಸಾಮಾನ್ಯ ಸೇವಕನಾದ ಕಾರ್ಯಕರ್ತನು, ಅವನು ನೀರು ಸರಬರಾಜು ಮಾಡುವ ಬಾಲಕನಾಗಿದ್ದರೂ ಸರಿ, ನಿಸ್ವಾರ್ಥತೆಯಿಂದಲೂ ನಿಷ್ಠೆಯಿಂದಲೂ ಸೇವಾನಿರತನಾಗಬೇಕಾಗಿದೆ. ಹಾಗೆ ಮಾಡುವಾಗ ಅವನು ಅಲ್ಲಾಹನ ಸಂಪ್ರೀತಿಗೆ ಪಾತ್ರನಾಗುತ್ತಾನಲ್ಲದೆ ಅಹ್ಮದಿಯೇತರ ಜನರನ್ನು ಪ್ರಭಾವಿಸುವವನಾಗಿರುತ್ತಾನೆ. ಅವರ ಬಗ್ಗೆ ಜಲ್ಸಕ್ಕೆ ಆಗಮಿಸುವ ಅತಿಥಿಗಳು ಸಹ ತಮ್ಮ ಅಭಿಪ್ರಾಯ ಪ್ರಕಟಿಸುತ್ತಾರೆ. ಇದೇ ರೀತಿ ಕಾರ್ಯಕರ್ತರು ಮಾತ್ರವಲ್ಲ ಅವರ ಮೇಲಾಧಿಕಾರಿಗಳು ಸಹ ನೆನಪಿಡಬೇಕಾದುದು ಏನೆಂದರೆ ತಮ್ಮ ಅಧೀನದಲ್ಲಿರುವ ಸಹಾಯಕರನ್ನೂ ಕಾರ್ಯಕರ್ತರನ್ನೂ ಅವರು ಮಾತ್ರ ಸೇವೆ ಸಲ್ಲಿಸಬೇಕಾದುದು ಎಂದು ಪರಿಗಣಿಸಿ ಅವರಿಂದ ಮಾತ್ರ ಸೇವೆ ಮಾಡಿಸದೆ ತಾವು ಸ್ವತಃ ಸಹ ವಿನಯಾನ್ವಿತರಾಗಿ ಒಬ್ಬ ಸಾಮಾನ್ಯ ಕಾರ್ಯಕರ್ತನ ಹಾಗೆ ಅತಿಥಿಗಳ ಸೇವೆ ಮಾಡಲು ಪ್ರಯತ್ನಿಸಬೇಕು. ತಮ್ಮ ಕಾರ್ಯಕರ್ತರೊಂದಿಗೆ, ಇತರರೊಂದಿಗೆ ಮತ್ತು ಅತಿಥಿಗಳೊಂದಿಗೆ ತಮ್ಮ ವರ್ತನೆಯನ್ನು ಮೃದುವಾಗಿ ಮತ್ತು ಸಹಾಯಕವಾಗಿ ಇರಿಸಬೇಕು. ಮುಖ ಚಹರೆಯಲ್ಲಿ ಮೃದುಭಾವನೆ ಪ್ರಕಟವಾಗುತ್ತಿರಲಿ. ಮಾತು ಮೃದುವಾಗಿರಿಸಿ ಸ್ವಭಾವ ಗುಣದ ಉನ್ನತ ಮಟ್ಟವನ್ನು ಪ್ರಕಟಿಸುವವರಾಗಬೇಕು. ಯಾವಾಗಲೂ ನೆನಪಿಡಬೇಕಾದುದು ಏನೆಂದರೆ ಅತಿಥಿಸತ್ಕಾರ

ಮಾಡುವ ವಿಭಾಗ ಬಹಳ ಪ್ರಮುಖ ವಿಭಾಗವಾಗಿದೆ. ಊಟದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ವಾಸ್ತವ್ಯದ ವ್ಯವಸ್ಥೆ ಇವು ಮಾತ್ರ ಅತಿಥಿ ಸತ್ಕಾರವಲ್ಲ. ಜಲ್ಸದ ಪ್ರತಿಯೊಂದು ವಿಭಾಗ ಅದಕ್ಕೆ ಯಾವ ಹೆಸರು ನೀಡಲ್ಪಟ್ಟರೂ ಅದು ಅತಿಥಿ ಸತ್ಕಾರದ ವಿಭಾಗವೇ ಆಗಿರುತ್ತದೆ. ಜಲ್ಸಕ್ಕೆ ಆಗಮಿಸುವ ಪ್ರತಿಯೊಬ್ಬನು ಅತಿಥಿಯಾಗಿದ್ದಾನೆ. ಅವನ ಆವಶ್ಯಕತೆಗಳ ಬಗ್ಗೆ ಗಮನವನ್ನು ತನಗೆ ಸಾಧ್ಯವಿರುವಷ್ಟು ಮಟ್ಟಿಗೆ ಇರಿಸುವುದು ಜಲ್ಸ ಸಾಲಾನಕ್ಕೆ ನಿಯೋಜಿಸಲಾದ ಪ್ರತಿಯೊಬ್ಬ ಕಾರ್ಯಕರ್ತನ ಆವಶ್ಯಕ ಕರ್ತವ್ಯವಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಭಾವನೆಗಳನ್ನು ಒಂದು ಸ್ಥಳದಲ್ಲಿ ಹೀಗೆ ವಿವರಿಸಿದ್ದಾರೆ. ಅದು ನಮಗೆ ಮಾರ್ಗಸೂಚಿಯಾಗಿದೆ. ಅವರು ಒಂದು ಸಂದರ್ಭದಲ್ಲಿ ಹೇಳಿದರು: ಯಾವುದೇ ಅತಿಥಿಗೆ ಕಷ್ಟವಾಗಬಾರದೆಂದು ನಾನು ಯಾವಾಗಲೂ ಯೋಚಿಸುತ್ತಿರುತ್ತೇನೆ. ಅತಿಥಿಗೆ ಸಾಧ್ಯವಿರುವಷ್ಟು ಸುಖ ಸೌಲಭ್ಯ ನೀಡಬೇಕೆಂದು ನಾನು ಒತ್ತಿ ಹೇಳುತ್ತೇನೆ. ಅತಿಥಿಯ ಹೃದಯ ಕನ್ನಡಿಯ ಹಾಗೆ ನಾಜೂಕಾಗಿರುತ್ತದೆ. ಸ್ವಲ್ಪ ಮಾತ್ರ ಪೆಟ್ಟು ಬಿದ್ದರೂ ಅದು ಒಡೆದು ಹೋಗುತ್ತದೆ.

ಆದುದರಿಂದ ನಾವು ಯಾವಾಗಲೂ ನೆನಪಿಡಬೇಕಾದುದು ಏನೆಂದರೆ ನಮ್ಮ ಸ್ವಂತ ಸ್ವಭಾವವನ್ನು ದಬಾಯಿಸಿಯಾದರೂ ನಾವು ಅತಿಥಿಗೆ ಸುಖ ಸೌಲಭ್ಯವನ್ನು ನೀಡಲು ಪ್ರಯತ್ನಿಸಬೇಕು. ಪ್ರತಿಯೊಂದು ವಿಭಾಗದ ಅಧಿಕಾರಿಗಳೊಂದಿಗೆ ನಾನು ಹೇಳಲು ಇಚ್ಛಿಸುವುದೇನೆಂದರೆ ಅವರ ವರ್ತನೆ ಮೃದುವಾಗಿದ್ದರೆ, ಅವರ ಸ್ವಭಾವಗುಣ ಒಳ್ಳೆಯದಾಗಿದ್ದರೆ, ಅವರಲ್ಲಿ ಸಹನೆಯ ಗುಣವಿದ್ದರೆ ಅತೃಪ್ತಿಕರವಾದ ಮಾತುಗಳನ್ನು ಸಹ ಆಲಿಸುವ ಧೈರ್ಯ ಅವರಿಗಿದ್ದರೆ, ಅವರ ಸಹಾಯಕರು ಸಹ ಅದೇ ರೀತಿಯಲ್ಲಿ ಅತಿಥಿಗಳೊಂದಿಗೆ ವರ್ತಿಸುವರು ಮತ್ತು ಅತಿಥಿ ಸತ್ಕಾರದ ಉತ್ತಮ ಮಾದರಿಯನ್ನು ಸ್ಥಾಪಿಸುವರು. ಆದರೆ ಅಧಿಕಾರಿ ವರ್ಗದವರು ಸಿಡುಕು ಮುಖವನ್ನು ಹೊಂದಿದ್ದರೆ, ಕಟುವಾಗಿ ಮಾತನಾಡುವವರಾಗಿದ್ದರೆ, ಜನರ ಮಾತುಗಳನ್ನು ಲಕ್ಷ್ಯವಿಟ್ಟು ಆಲಿಸದವರೂ ಸಹಿಸದವರೂ ಆಗಿದ್ದರೆ, ಅವರ ಸಹಾಯಕರೂ ಸಹ ಅದೇ ರೀತಿ ಅತಿಥಿಗಳೊಂದಿಗೆ ವರ್ತಿಸುವವರಾಗುವರು. ಆದುದರಿಂದ ಅತಿಥಿ ಸತ್ಕಾರದ ಉನ್ನತ ಮಟ್ಟವನ್ನು ಸ್ಥಾಪಿಸಲು ಪ್ರತಿಯೊಂದು ವಿಭಾಗದ ಮೇಲಧಿಕಾರಿಗಳು ತಮ್ಮ ಸ್ಥಿತಿಯ ಬಗ್ಗೆ ಪರಿಶೋಧಿಸುತ್ತಾ ಇರಬೇಕು. ವಿನಯ ಮತ್ತು ನಮ್ರತೆಯನ್ನು ಅತ್ಯುನ್ನತ ಮಟ್ಟಕ್ಕೆ ತಲಪಿಸಲು ಪ್ರಯತ್ನಿಸುತ್ತಾ ಇರಬೇಕು.

ವಾಸ್ತವ್ಯದ ವ್ಯವಸ್ಥೆ ಮಾಡುವ ವಿಭಾಗದವರು, ಸಾಮೂಹಿಕ ವಸತಿಗಳಲ್ಲಿಯೂ ಡೇರೆಗಳಲ್ಲಿಯೂ ಮಹಿಳೆಯರ ಮತ್ತು ಮಕ್ಕಳ ಹಾಸಿಗೆ ಹೊದಿಕೆಗಳ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಬೇಕು. ಈಗ ಸೆಖೆಗಾಲವಾಗಿದ್ದರೂ ರಾತ್ರಿ ಹವಾಮಾನ ದಿಢೀರಾಗಿ ತಂಪಾಗುತ್ತದೆ. ಹದೀಖತುಲ್ ಮಹ್‌ದಿಯ ತಾಪಮಾನ ಲಂಡನ್‌ಗಿಂತ ಸಾಮಾನ್ಯವಾಗಿ ನಾಲ್ಕೈದು ಡಿಗ್ರಿ ಕಡಿಮೆಯೇ ಇರುತ್ತದೆ. ಆದರೆ ರಾತ್ರಿ ಹೊತ್ತು ಇಲ್ಲಿ ಮಲಗುವ ವ್ಯವಸ್ಥೆ ಮಾಡುವವರು ಹಾಸಿಗೆ ಹೊದಿಕೆಗಳ ಒಳ್ಳೆಯ ವ್ಯವಸ್ಥೆ ಮಾಡಬೇಕು. ಕಳೆದ ವರ್ಷದ ಅನುಭವವೇನೆಂದರೆ ಮಕ್ಕಳ ಜೊತೆ ಇದ್ದವರು ಹವಾಮಾನ ತಂಪಾದ ಕಾರಣ ರಾತ್ರಿ ಕಷ್ಟವನ್ನು ಅನುಭವಿಸಿದ್ದರು. ಆದುದರಿಂದ ಈ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿದೆ.

ಇದೇ ರೀತಿ ಅತಿಥಿಗಳಿಗೆ ಆಹಾರ ಸರಬರಾಜು ಮಾಡುವವರಿಗೆ ನಾನು ಯಾವಾಗಲೂ ನೆನಪಿಸಿಕೊಡುತ್ತೇನೆ. ಆಹಾರ ಸರಬರಾಜು ವಿಭಾಗವು ಅತಿಥಿಗಳೊಂದಿಗೆ ನೇರ ಸಂಪರ್ಕ ಹೊಂದಿದ ವಿಭಾಗವಾಗಿದೆ. ಆಹಾರವನ್ನು ಪ್ಲೇಟಿಗೆ ಹಾಕುವಾಗ ಅತಿಥಿಯ ಇಷ್ಟವೇನೆಂದು ನೋಡಬೇಕು. ಇದಕ್ಕೆ ಸಾಕಷ್ಟು ಸಮಯ ಮತ್ತು ಕಷ್ಟ ಪಡುವುದು ಆವಶ್ಯಕವಾಗುತ್ತದೆ. ಆದರೆ ತಮಗೆ ಸಾಧ್ಯವಿರುವಷ್ಟು ಈ ಬಗ್ಗೆ ಗಮನ ಹರಿಸಬೇಕು. ಏನಾದರೂ ಬಿಕ್ಕಟ್ಟು ತಲೆದೋರುವುದಾದರೆ ಆಗ ಉತ್ತಮ ರೀತಿಯಲ್ಲಿ ಅತಿಥಿಗೆ ಉತ್ತರ ನೀಡಿರಿ.

ಅದೇ ರೀತಿ ಸಾರಿಗೆ ವ್ಯವಸ್ಥೆ ಸಹ ಬಹಳ ಮುಖ್ಯ ವ್ಯವಸ್ಥೆಯಾಗಿದೆ. ಈ ಸಾರಿ ಪಾರ್ಕಿಂಗ್ ಸ್ಥಳ ದೂರವಿರುವ ಕಾರಣ ಅತಿಥಿಗಳಿಗೋಸ್ಕರ ಶಟ್ಲ್ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಆ ಮೂಲಕ ಅವರು ಸಮಯಕ್ಕೆ ಸರಿಯಾಗಿ ಜಲ್ಸಗಾಹ್‌ಗೆ ತಲಪಬಹುದು. ಕಾರುಗಳಲ್ಲಿ ಆಗಮಿಸುವವರು ಈ ವಿಷಯ ಗಮನಿಸಬೇಕು. ಪಾರ್ಕಿಂಗ್ ಸ್ಥಳ ದೂರವಿರುವ ಕಾರಣ ಸಾಕಷ್ಟು ಸಮಯ ದೊರಕುವ ರೀತಿಯಲ್ಲಿ ಅವರು ತಮ್ಮ ಪ್ರಯಾಣ ಪ್ರಾರಂಭಿಸಬೇಕು.

ಇದೇ ರೀತಿ ಬೇರೆ ವಿಭಾಗಗಳು ಸಹ ತಮ್ಮ ಕೆಲಸ ಮಾಡುವ ವಿಧಾನವನ್ನು ಮತ್ತು ಕಾರ್ಯಕರ್ತರಿಗೆ ತರಬೇತಿ ನೀಡುವುದನ್ನು ಹೇಗೆ ರೂಪಿಸಬೇಕೆಂದರೆ ಅತಿಥಿಗಳಿಗೆ ಹೆಚ್ಚು ಹೆಚ್ಚಾಗಿ ಸೌಲಭ್ಯಗಳನ್ನು ಒದಗಿಸುವ ಚಿಂತೆಯಿಂದ ಅವರು ಕಾರ್ಯವೆಸಗಬೇಕು. ಖಿದ್‌ಮತೆ ಖಲ್ಕ್ ಮತ್ತು ಸೆಕ್ಯುರಿಟಿ ವಿಭಾಗದ ಕಾರ್ಯಕರ್ತರು ಹಿಂದಿನ ಕಾಲಕ್ಕಿಂತ ಹೆಚ್ಚು ಜಾಗರೂಕತೆಯಿಂದ ಕೆಲಸ ಮಾಡಬೇಕು. ಲೋಕದ ಇಂದಿನ ಸ್ಥಿತಿಗೆ ಅನುಸಾರವಾಗಿ ಅವರು ಕಾರ್ಯನಿರತರಾಗಬೇಕು. ಆದರೆ ಅದರೊಂದಿಗೆ ಅತಿಥಿಗಳನ್ನು ಗೌರವಿಸುತ್ತಾ ಅವರಿಗೆ ಮನೋವೇದನೆ ಉಂಟಾಗದಂತೆ ಈ ಎಲ್ಲ ಕೆಲಸಗಳನ್ನು ಮಾಡಬೇಕು. ಕಾರ್ಡ್‌ಗಳ ಚೆಕ್ಕಿಂಗ್, ಇತರ ಚೆಕ್ಕಿಂಗ್ ಮತ್ತು ಸ್ಕ್ಯಾನಿಂಗ್ ಮೊದಲಾದುವುಗಳನ್ನು ಪ್ರಥಮ ದಿನದಿಂದ ಮೊದಲುಗೊಂಡು ಕೊನೆಯ ದಿನದ ತನಕ ಪರಿಪೂರ್ಣ ಶ್ರದ್ಧೆಯಿಂದ ನಡೆಸಬೇಕು. ಯಾರಾದರೂ ಹೊರಗೆ ಹೋಗಿ ಮರಳಿ ಬರುವಾಗ ಸಂಪೂರ್ಣವಾಗಿ ತಪಾಸಣೆ ನಡೆಸಬೇಕು. ಆದರೆ ತಮ್ಮ ಬಗ್ಗೆಯೇ ಸೆಕ್ಯುರಿಟಿಯವರು ಗಮನಿಸುತ್ತಿದ್ದಾರೆ ಹಾಗೂ ನಮ್ಮೊಂದಿಗೆ ಮಾತ್ರ ಈ ರೀತಿ ಕೆಟ್ಟದಾಗಿ ವರ್ತಿಸಲಾಗುತ್ತದೆ ಎಂಬ ಭಾವನೆ ಯಾರಲ್ಲಿಯೂ ಹುಟ್ಟದಂತೆ ಗಮನ ಹರಿಸಬೇಕು.

ಜಲ್ಸ ಸಾಲಾನದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಯಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಯಾಗಿ ಆಗಮಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ನಾವು ಗಣ್ಯ ಅತಿಥಿ ಎಂದೇ ಪರಿಗಣಿಸಿ ಅವರಿಗೆ ಅತಿಥಿ ಸತ್ಕಾರ ಮಾಡಲು ಧಾರಾಳವಾಗಿ ಪ್ರಯತ್ನಿಸಬೇಕಾಗಿದೆ. ಪ್ರತಿಯೊಂದು ವಿಭಾಗದ ಮೇಲಧಿಕಾರಿ ತನ್ನ ವಿಭಾಗದ

ಕುಂದು ಕೊರತೆಗಳನ್ನು ಪರಿಶೀಲಿಸಲು ಕೆಲವರನ್ನು ನೇಮಿಸಬೇಕು. ಅವರು ತಮ್ಮ ವಿಭಾಗದ ಕೆಲಸಗಳ ಕುಂದುಕೊರತೆಗಳನ್ನು ಪರಿಶೋಧಿಸಿ ಪ್ರತಿದಿನ ಸಾಯಂಕಾಲ ತಮ್ಮ ಮೇಲಧಿಕಾರಿಗೆ ವರದಿ ಸಲ್ಲಿಸಬೇಕು. ಹೀಗೆ ಮಾಡುವುದರಿಂದ ಜಲ್ಸದ ಕಾಲದಲ್ಲಿಯೂ ಮುಂದೆ ಜರಗುವ ಜಲ್ಸಗಳಲ್ಲಿಯೂ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಸಹಾಯಕವಾಗುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇದರ ಬಗ್ಗೆ ಗಮನ ಹರಿಸುತ್ತಾ ಒಮ್ಮೆ ಹೀಗೆ ಹೇಳಿದ್ದರು: ಲಂಗರ್ ಖಾನದ (ಭೋಜನ ಶಾಲೆಯ) ವ್ಯವಸ್ಥಾಪಕ ಅತಿಥಿಗಳ ಆವಶ್ಯಕತೆಗಳೇನೆಂದು ಪರಿಶೋಧಿಸುತ್ತಾ ಇರಬೇಕು. ಆದರೆ ವ್ಯವಸ್ಥಾಪಕ ಒಬ್ಬನೇ ಆಗಿರುವುದರಿಂದ ಕೆಲವು ಸಾರಿ ಅದರ ಬಗ್ಗೆ ಯೋಚನೆ ಇರುವುದಿಲ್ಲ. ಅಥವಾ ಕೆಲವು ವಿಷಯಗಳು ದೃಷ್ಟಿಯಿಂದ ಮರೆಯಾಗಿರುತ್ತವೆ. ಆದುದರಿಂದ ಬೇರೆ ಒಬ್ಬ ಅದರ ಬಗ್ಗೆ ನೆನಪಿಸಿಕೊಡಬೇಕು.

ನೆನಪಿಸಿಕೊಡಲು ಉತ್ತಮವಾದ ವಿಧಾನವೇನೆಂದರೆ ಅದಕ್ಕಾಗಿ ಅಧಿಕಾರಿ ಸ್ವತಃ ಒಬ್ಬನನ್ನು ನೇಮಿಸಬೇಕು. ಹೀಗೆ ನೇಮಿಸಲ್ಪಟ್ಟ ವ್ಯಕ್ತಿ ಕುಂದುಕೊರತೆಗಳ ಬಗ್ಗೆ ಪರಿಶೋಧಿಸುತ್ತಾ ಇರಬೇಕು. ಬಡವ ಮತ್ತು ಶ್ರೀಮಂತ ಎಂಬ ವ್ಯತ್ಯಾಸವಿಲ್ಲದೆ ಒಂದೇ ರೀತಿಯಲ್ಲಿ ಅತಿಥಿ ಸತ್ಕಾರ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸಂದರ್ಭದಲ್ಲಿ ಹಳಿದರು: ಹೊಸದಾಗಿ ಬರುವ ಅತಿಥಿಗಳಿಗೆ ಸಂಬಂಧಿಸಿ ಅವರ ಪ್ರತಿಯೊಂದು ಆವಶ್ಯಕತೆಯ ಬಗ್ಗೆ ಗಮನವಿರಿಸಬೇಕು. ಕೆಲವು ಸಾರಿ ಒಬ್ಬನಿಗೆ ಶೌಚಾಲಯ ಎಲ್ಲಿದೆ ಎಂದು ಸಹ ತಿಳಿದಿರುವುದಿಲ್ಲ. ಅಂತಹ ವ್ಯಕ್ತಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಅತಿಥಿಯ ಆವಶ್ಯಕತೆಗಳ ಬಗ್ಗೆ ಬಹಳ ಚೆನ್ನಾಗಿ ಗಮನ ಹರಿಸಬೇಕಾಗಿದೆ. ಯಾರನ್ನು ಕಾರ್ಯಕರ್ತರಾಗಿ ನೇಮಿಸಲಾಗಿದೆಯೋ ಅವರಿಗೆ ಕಡ್ಡಾಯವಾಗಿರುವುದೇನೆಂದರೆ ಯಾವುದೇ ರೀತಿ ದೂರುಗಳು ಬರದಂತೆ ಅವರು ನೋಡಿಕೊಳ್ಳಬೇಕು. ಏಕೆಂದರೆ ಜನರು ನೂರಾರು, ಸಾವಿರಾರು ಮೈಲು ದೂರದಿಂದ ಪ್ರಯಾಣ ಮಾಡಿ ಸತ್ಯ ಮತ್ತು ಸುಸ್ವಭಾವದೊಂದಿಗೆ ಸತ್ಯಾನ್ವೇಷಣೆಗೋಸ್ಕರ ಆಗಮಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು: ನನ್ನ ತತ್ವವೇನೆಂದರೆ ಒಬ್ಬ ಅತಿಥಿ ಆಗಮಿಸಿದಾಗ ಬೈಗಳು ಮತ್ತು ನಿಂದೆ ಆ ವ್ಯಕ್ತಿಯಿಂದ ಆಲಿಸಬೇಕಾಗಿ ಬಂದರೂ ಅದನ್ನು ಸಹಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಾಡುತ್ತಿದ್ದ ಅತಿಥಿ ಸತ್ಕಾರದ ಮಟ್ಟದ ಬಗ್ಗೆ ವಿವರಿಸುತ್ತಾ ಒಬ್ಬರು ಹೀಗೆ ಬರೆದಿದ್ದಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಾಡುತ್ತಿದ್ದ ಅತಿಥಿ ಸತ್ಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡುತ್ತಿದ್ದ ಅತಿಥಿ ಸತ್ಕಾರದ ಜೀವಂತ ಮಾದರಿಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗೆ ಸಹವಾಸ ಮಾಡಲು ಹೆಚ್ಚು ಸಂದರ್ಭ ದೊರೆತವರಿಗೆ ಚೆನ್ನಾಗಿ ತಿಳಿದಿದೆ, ಆಗಮಿಸುವ ಒಬ್ಬ ಅತಿಥಿ ಅಹ್ಮದಿಯಾಗಿದ್ದರೂ ಅಹ್ಮದಿಯೇತರನಾಗಿದ್ದರೂ ಆ ವ್ಯಕ್ತಿಗೆ ಒಂದಿಷ್ಟು ಕಷ್ಟ ಸಂಭವಿಸಿದರೂ ಹುಝೂರರು ಅತ್ಯಂತ ಆತಂಕ ಭರಿತರಾಗುತ್ತಿದ್ದರು. ನಿಷ್ಠಾವಂತರಾದವರ ಬಗ್ಗೆ ಹುಝೂರರ ಆತ್ಮದಲ್ಲಿ ಉತ್ಸಾಹ ಮತ್ತು ವಾತ್ಸಲ್ಯ ಇನ್ನಷ್ಟು ಹೆಚ್ಚಿಗೆ ಇರುತ್ತದೆ.

ಆದುದರಿಂದ ಜಲ್ಸಕ್ಕೆ ಆಗಮಿಸುವ ಅತಿಥಿಗಳ ಬಗ್ಗೆ ನಾವು ಹೆಚ್ಚು ಹೆಚ್ಚಾಗಿ ಉತ್ಸಾಹ ಭರಿತರೂ ವಾತ್ಸಲ್ಯ ಭರಿತರೂ ಆಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅತಿಥಿಯ ಮಹತ್ವ ಮತ್ತು ಅತಿಥಿಯನ್ನು ಗೌರವಿಸುವ ಬಗ್ಗೆ ನಮಗೆ ನೀಡಿದ ಉಪದೇಶವೇನು ಎಂಬುದರ ಬಗ್ಗೆ ಒಂದು ಹದೀಸು ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಅಲ್ಲಾಹನ ಬಗ್ಗೆ ಮತ್ತು ಅಂತಿಮ ವಿಚಾರಣೆಯ ದಿನದ ಬಗ್ಗೆ ವಿಶ್ವಾಸ ಹೊಂದಿದವನಾಗಲು ನೀವು ಮೂರು ಕೆಲಸಗಳನ್ನು ಮಾಡಬೇಕು. ಒಂದು, ಒಳ್ಳೆಯ ಮಾತನ್ನು ಹೇಳಬೇಕು ಅಥವಾ ಮೌನವಾಗಿರಬೇಕು. ಎರಡು, ನಿನ್ನ ನೆರೆಹೊರೆಯವನನ್ನು ಗೌರವಿಸಬೇಕು. ಮೂರು, ನಿನ್ನ ಅತಿಥಿಯನ್ನು ಗೌರವಿಸಬೇಕು.

ಆದುದರಿಂದ ಅಲ್ಲಾಹನ ಬಗ್ಗೆ ಮತ್ತು ಅಂತಿಮ ವಿಚಾರಣೆಯ ದಿನದ ಬಗ್ಗೆ ವಿಶ್ವಾಸ ಹೊಂದಲು ಇರುವ ಶರತ್ತುಗಳಲ್ಲಿ ಒಂದು, ಅತಿಥಿಯನ್ನು ಗೌರವಿಸಬೇಕೆಂಬ ಶರತ್ತಾಗಿದೆ. ಇವುಗಳಲ್ಲದೆ ಬೇರೆ ಅನೇಕ ಶರತ್ತುಗಳು ಸಹ ಇವೆ. ಒಬ್ಬ ವಿಶ್ವಾಸಿಯ ವಿಶ್ವಾಸದ ಉನ್ನತ ಮಟ್ಟದ ಬಗ್ಗೆ ಇರುವ ಶರತ್ತುಗಳಲ್ಲಿ ಅತಿಥಿ ಸತ್ಕಾರ ಮಾಡಬೇಕೆಂಬ ಶರತ್ತು ಸಹ ಇದೆ ಎಂದು ನಾವು ಹೇಳಬಹುದು. ಅತಿಥಿ ಸತ್ಕಾರಕ್ಕೆ ಸಂಬಂಧಿಸಿರುವ ಇನ್ನೊಂದು ವಿಷಯವೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅತಿಥಿಗಳ ಧಾರ್ಮಿಕ ನೆಲೆಯನ್ನು ಉತ್ತಮ ಪಡಿಸಲು ಸಹ ಗಮನ ಹರಿಸಿದ್ದರು. ಒಂದು ಹದೀಸು ಇದರ ಬಗ್ಗೆ ಹೀಗೆ ಇದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದ ಅತಿಥಿಗಳಿಗೆ ಆಹಾರ ನೀಡಿದ ನಂತರ ಅತಿಥಿಗಳನ್ನು ಅವರ ಇಚ್ಛೆ ಪ್ರಕಾರ ಮಸ್‌ಜಿದ್‌ನಲ್ಲಿ ಮಲಗಲು ಕಳುಹಿಸುತ್ತಿದ್ದರು. ಅನಂತರ ಬೆಳಗ್ಗೆ ಫಜರ್ ನಮಾಝ್‌ಗೋಸ್ಕರ ಅವರನ್ನು ಎಬ್ಬಿಸಿದರು.

ಆದುದರಿಂದ ಜಲ್ಸದಲ್ಲಿ ತರಬೇತಿ ವಿಭಾಗವನ್ನು ಸ್ಥಾಪಿಸಲಾಗಿದೆ. ಅದು ಅತಿಥಿಗಳಿಗೆ ನಮಾಝ್ ಅನುಷ್ಠಾನದ ಬಗ್ಗೆ ಗಮನ ಹರಿಸಲಿಕ್ಕಾಗಿದೆ. ತಹಜ್ಜುದ್ ಮತ್ತು ಫಜರ್ ನಮಾಝ್‌ಗೋಸ್ಕರ ಅವರನ್ನು ಎಬ್ಬಿಸಬೇಕು. ಆದರೆ ಪ್ರೀತಿಯಿಂದಲೂ ಮೃದುವಾಗಿಯೂ ಈ ಕೆಲಸ ನಿರ್ವಹಿಸಬೇಕು.

ಅತಿಥಿಗಳಿಗೆ ಸಂಬಂಧಿಸಿ ಕೆಲವು ವಿಷಯಗಳನ್ನು ನಾನು ನಿಮಗೆ ವಿವರಿಸಿದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಅತ್ಯುತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವ ಭಾಗ್ಯವನ್ನು ಎಲ್ಲ ಕಾರ್ಯಕರ್ತರಿಗೂ ಅಲ್ಲಾಹನು ದಯಪಾಲಿಸಲಿ – ಆಮೀನ್.

(ಖುತ್‌ಬದ ಕೊನೆಗೆ ಇಬ್ಬರು ಮೃತರ ನಮಾಝೆ ಜನಾಝು ಗಾಯಿಬ್ ನಿರ್ವಹಿಸುವ ಬಗ್ಗೆ ಹುಝೂರ್

ಪ್ರಕಟಿಸಿದರು. 1. ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹೇಬ್ ರಝಿಯಲ್ಲಾಹು ಅನ್‌ಹುರವರ ಪುತ್ರ, ಮುಕರ್ರಮ್ ಸಯ್ಯಿದ್ ಮುಹಮ್ಮದ್ ಅಹ್ಮದ್ ಸಾಹೇಬ್. ಅವರು ತನ್ನ 92ನೇ ವರ್ಷ ಪ್ರಾಯದಲ್ಲಿ 13–7–2017ರಂದು ಲಾಹೋರಿನಲ್ಲಿ ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. 2. ಮುಕರ್ರಮ್ ಚೌಧರಿ ಮುಹಮ್ಮದ್ ಸಿದ್ದೀಖ್ ಸಾಹೇಬ್ ಭಟ್ಟಿಯವರ ಪತ್ನಿ ಮುಕರ್ರಮ ಮಹ್‌ಮೂದ ಬೇಗಮ್ ಸಾಹೇಬ. ಅವರು 16–7–2017ರಂದು ತನ್ನ 73ನೇ ವಯಸ್ಸಿನಲ್ಲಿ ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ನೈಜೀರಿಯಾದ ಮುಬಲ್ಲಿಗ್ ಮುಕರ್ರಮ್ ಅಸ್‌ಗರ್ ಅಲಿ ಭಟ್ಟಿ ಸಾಹೇಬರ ಮಾತೆಯಾಗಿದ್ದರು.)

*****


***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 21-07-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon